ಕಾನೂನಿನ ನಡಿಗೆ ಮಹಿಳೆಯರ ಕಡೆಗೆ
DEEDS Since 1982

# DEEDS ಸಂವಾದ

## ಸಮತೆಯ ಸಮಾಜದೆಡೆಗೆ

ಸಂವಾದ 1

ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ನಿರ್ದೇಶಕರ ಮಾತು



ಮರ್ಲಿನ್ ಮಾರ್ಟಿಸ್

ಡೀಡ್ಸ್ (ಡೆವಲಪ್ಮೆಂಟ್ ಎಜುಕೇಶನ್ ಸರ್ವಿಸ್) ಸಂಸ್ಥೆಯು ಅಭಿವೃದ್ಧಿ ಕ್ಷೇತ್ರದಲ್ಲಿ ಕಳೆದ ನಾಲ್ಕು ದಶಕಗಳಿಂದ ಕಾರ್ಯ ನಿರ್ವಹಿಸುತ್ತಿರುವ ಒಂದು ಸ್ವಯಂ ಸೇವಾ ಸಂಸ್ಥೆಯಾಗಿದೆ. ದಿವಂಗತ ಡೆಸ್ಮೆಂಡ್ ಡಿ'ಅಬ್ರಿಯೋ ಮತ್ತು ಅವರ ಪತ್ನಿ ಮಾರ್ಗರೆಟ್ಟ್ ಡಿ'ಅಬ್ರಿಯೋರವರಿಂದ ಮಂಗಳೂರಿನಲ್ಲಿ ಕಾರ್ಯಾರಂಭವಾದ ಸಂಸ್ಥೆಯು ಆರಂಭದಲ್ಲಿ ಅವಿಭಜಿತ ದಕ್ಷಿಣ ಕನ್ನಡದಲ್ಲಿ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು, ಆ ನಂತರ ತನ್ನ ಕಾರ್ಯಚಟುವಟಿಕೆಗಳನ್ನು ಕರ್ನಾಟಕದಾದ್ಯಂತ ವಿಸ್ತರಿಸಿದೆ. ಶ್ರೀಮತಿ ಮರ್ಲಿನ್ ಮಾರ್ಟಿಸ್‌ರವರು ಸಂಸ್ಥೆಯ ನಿರ್ದೇಶಕರಾಗಿ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ.

ಸಮಾಜಕ್ಕೆ ಮಹಿಳೆಯರು ಪುರುಷರಷ್ಟೇ ಕೊಡುಗೆಗಳನ್ನು ನೀಡುತ್ತಿದ್ದರೂ ಅವಕಾಶಗಳಲ್ಲಿ ಮಹಿಳೆಯ ಮೇಲೆ ತಾರತಮ್ಯ ಯಾಕಿದೆ? ಮಹಿಳೆಯರಿಗೆ ಪುರುಷರಷ್ಟೇ ಸ್ವಾತಂತ್ರ್ಯ ಅನುಭವಿಸುವ, ತಮ್ಮ ಜೀವನ ತಾನು ರೂಪಿಸಿಕೊಳ್ಳುವ ಅವಕಾಶಗಳಿರಬೇಕು. ನಮ್ಮ ಮನೆಗಳಲ್ಲಿ ಹೆಣ್ಣು, ಗಂಡುಮಕ್ಕಳನ್ನು ಸಮಾನವಾಗಿ ಕಾಣುವ, ಬೆಳೆಸುವ ಕಾರ್ಯವಾಗಬೇಕು. ಆಕೆಯ ಆಸೆ, ಕನಸು, ಗುರಿಗಳನ್ನು ಪ್ರೋತ್ಸಾಹಿಸುವ ಹಾಗೂ ಆಕೆಯ ಅಭಿಪ್ರಾಯ, ನಿರ್ಧಾರಗಳಿಗೆ ಮನ್ನಣೆ ನೀಡುವ ಕಾರ್ಯಗಳಾದಾಗ ಮಾತ್ರ ಸಮಾನತೆ, ನವ ಸಮಾಜ ನಿರ್ಮಾಣವಾಗಲು ಸಾಧ್ಯ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಮೇಲಿನ ಲಿಂಗತಾರತಮ್ಯ ಮತ್ತು ಹಿಂಸೆಯನ್ನು ತಡೆಯಲು ಡೀಡ್ಸ್ ಪೂರಕ ಕಾನೂನು ಯೋಜನೆಯನ್ನು ಆರಂಭಿಸಿತ್ತು. 2020–23ರ ಸಾಲಿನಲ್ಲಿ ಉತ್ತರಕನ್ನಡ, ಧಾರವಾಡ, ಬಳ್ಳಾರಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಆಸಕ್ತ 145 ಮಹಿಳೆಯರು ಮತ್ತು ಪುರುಷರು ಮೂರು ಹಂತಗಳಲ್ಲಿ ಲಿಂಗತ್ವ, ಮಹಿಳಾ ಕಾನೂನು ಮತ್ತು ಮಹಿಳಾ ಪ್ರಕರಣ ನಿರ್ವಹಣೆ ವಿಷಯಗಳಲ್ಲಿ ತರಬೇತಿ ಪಡೆದು ಕಾನೂನು ಸುಗಮಕಾರರಾಗಿದ್ದಾರೆ. ಇವರು ಮೂರು ಹಂತಗಳಲ್ಲಿ ತಳಮಟ್ಟದಲ್ಲಿ ಅರಿವಿನ ಕಾರ್ಯಕ್ರಮಗಳ ಮೂಲಕ ಸುಮಾರು 15625 ಮಹಿಳೆಯರಿಗೆ ಮತ್ತು ಪುರುಷರಿಗೆ ಮಾಹಿತಿ ಮತ್ತು ಕರಪತ್ರಗಳ ಮೂಲಕ ಕಾನೂನು, ಇಲಾಖಾ ಸಹಾಯವಾಣಿಗಳನ್ನು ಮನೆ–ನೆರೆಮನೆಗಳಿಗೆ ತಲುಪಿಸಿದ್ದಾರೆ. ಸುಮಾರು 12,300 ಶಾಲಾಮಕ್ಕಳಿಗೆ ಜಾಥಾ, ಮನೆಮನೆ ಮಾಹಿತಿ ಮೂಲಕ 20,000 ಮನೆಗಳಿಗೆ ಮಾಹಿತಿ ನೀಡಿರುತ್ತೇವೆ. ನಾಲ್ಕು ಜಿಲ್ಲೆಗಳಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಸುಮಾರು 58 ಅರೆಕಾಲಿಕ ಸ್ವಯಂಸೇವಕರಾಗಿ ನೇಮಕಗೊಂಡಿದ್ದಾರೆ. ಅವರವರ ಜಿಲ್ಲೆಗಳಲ್ಲಿ ಪ್ರಕರಣಗಳನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮೂಲಕ ನಿರ್ವಹಿಸುತ್ತಿದ್ದಾರೆ. ಧಾರವಾಡ ಮತ್ತು ಉತ್ತರಕನ್ನಡದಲ್ಲಿ ನಾಲ್ಕು ಮಂದಿ ಅರೆಕಾಲಿಕ ಸುಗಮಕಾರರನ್ನು ಅತ್ಯುತ್ತಮವೆಂದು ಪುರಸ್ಕರಿಸಿದ್ದಾರೆ ಮತ್ತು ಎರಡು ಮಂದಿ ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ.

2020–2023ರ ಸಾಲಿನಲ್ಲಿ ತಳಮಟ್ಟದಲ್ಲಿ ಮಾಹಿತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ 89.53% ಮಹಿಳೆಯರಲ್ಲಿ ಲಿಂಗ ಮತ್ತು ಮಹಿಳಾ ಕಾನೂನುಗಳ ಮೇಲಿನ ಅರಿವು 60% ಹೆಚ್ಚಾಗಿದೆ ಮತ್ತು 56% ತಳಮಟ್ಟದ ಮಹಿಳೆಯರು ಹಿಂಸಾಚಾರ ಸಂಬಂಧಿತ ಸಮಸ್ಯೆಗಳ ಮೇಲೆ ಕಾರ್ಯ ನಿರ್ವಹಿಸಲು ಸಿದ್ಧತೆಯನ್ನು ಲಿಂಗತ್ವ, ಕೌಟುಂಬಿಕ ದೌರ್ಜನ್ಯ, ಬಾಲ್ಯವಿವಾಹ ಮತ್ತು ಪೋಕ್ಸೋಗೆ ಸಂಬಂಧಿಸಿದ ಪ್ರಕರಣಗಳಲ್ಲಿ ತೋರಿಸಿದ್ದಾರೆ. ತರಬೇತಿ ಪಡೆದ ಸುಗಮಕಾರರು ಮತ್ತು ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಚಯವು ಆಯಾಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಮೂಲಕ ಸುಮಾರು 194 ಮಹಿಳಾ ಪ್ರಕರಣಗಳನ್ನು ನಿರ್ವಹಿಸಿದ್ದಾರೆ. ಅವುಗಳಲ್ಲಿ 48 ಕೌಟುಂಬಿಕ ದೌರ್ಜನ್ಯ ಪ್ರಕರಣಗಳಿಗೆ ನ್ಯಾಯ ದೊರಕಿದೆ. 29 ಬಾಲ್ಯ ವಿವಾಹ ತಡೆಗಟ್ಟಿದ್ದಾರೆ, 4 ಪೋಕ್ಸೋ ಪ್ರಕರಣ ಮತ್ತು 3 ಆಸ್ತಿಪ್ರಕರಣಗಳಲ್ಲಿ ನ್ಯಾಯ ಒದಗಿಸಲಾಗಿದೆ.

ಕಾನೂನು ಮಾಹಿತಿಯಿಂದ ಹಳ್ಳಿಗಳಲ್ಲಿ ಹಿಂಸೆಯ ಪ್ರಮಾಣ ಇಳಿಮುಖವಾಗಿದೆ ಎಂದು ಮಹಿಳೆಯರು ಸಮಾವೇಶಗಳಲ್ಲಿ ಹೇಳಿದ್ದಾರೆ. ಹಿಂದಿನ ಅನುಭವ ಮತ್ತು ಮಾಹಿತಿಯ ಬೇಡಿಕೆ ಹಿನ್ನೆಲೆಯಲ್ಲಿ 2023–26ರ ಸಾಲಿನಲ್ಲಿ ದಕ್ಷಿಣಕನ್ನಡ, ಉತ್ತರಕನ್ನಡ, ಧಾರವಾಡ, ಬಳ್ಳಾರಿ, ಬಾಗಲಕೋಟೆ, ಗದಗ ಜಿಲ್ಲೆಗಳಲ್ಲಿ ಲಿಂಗತ್ವ ಮತ್ತು ಮಹಿಳಾ ಕಾನೂನು ಕಾರ್ಯಕ್ರಮಗಳನ್ನು ನಡೆಸಲು ಯೋಜಿಸಿರುತ್ತೇವೆ. ಈ ಕಾರ್ಯಕ್ರಮಗಳನ್ನು ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಚಯ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಸ್ಥಳೀಯ ಸೇವಾ ಸಂಸ್ಥೆಗಳು, ಇತರೆ ಇಲಾಖೆಗಳ ಸಹಭಾಗಿತ್ವದೊಂದಿಗೆ ನಡೆಸುತ್ತಿದ್ದೇವೆ. ಈಗಾಗಲೇ 5 ಜಿಲ್ಲೆಗಳಲ್ಲಿ ಆಸಕ್ತ 150 ಮಂದಿಯನ್ನು ಆಯಾಯ ಜಿಲ್ಲೆಯ ಸಮುಚ್ಚಯದವರು ಆಯ್ಕೆ ಮಾಡಿ ಅವರಿಗೆ ಪೂರಕ ಕಾನೂನು ತರಬೇತಿಯ ಬಗ್ಗೆ ಮಾಹಿತಿ ಕಾರ್ಯಕ್ರಮಗಳ ಮೂಲಕ ತಿಳಿಸಲಾಗಿದೆ. ನವೆಂಬರ್ ತಿಂಗಳಲ್ಲಿ ಐದು ಜಿಲ್ಲೆಗಳಲ್ಲಿ ಮೊದಲ ಹಂತದ ಲಿಂಗತ್ವ ತರಬೇತಿಯನ್ನು ಪ್ರಾರಂಭಿಸಿದ್ದೇವೆ. ತರಬೇತಿ ಪಡೆದ 150 ಸುಗಮಕಾರರು 60 ಮಂದಿಯಂತೆ 9000 ಜನರಿಗೆ ಮಾಹಿತಿ ತಲುಪಿಸಲಿದ್ದಾರೆ. ತರಬೇತಿ ಪ್ರಾರಂಭಿಸುವ ಮೊದಲು ತಳಮಟ್ಟದ ಜನರಿಂದ ಮೂಲ ಮಾಹಿತಿ ಸಂಗ್ರಹಿಸುವ ಉದ್ದೇಶವಿದೆ. ತಳಮಟ್ಟದ ಮಾಹಿತಿ ಕಾರ್ಯಕ್ರಮ ನಡೆದ ನಂತರ ಮೌಲ್ಯಮಾಪನ ಮಾಡಲಾಗುತ್ತದೆ.

ನಮ್ಮೆಲ್ಲರ ಬದುಕನ್ನು, ಮುಂದಿನ ನಮ್ಮ ಮಕ್ಕಳ, ಸಮುದಾಯದ ಬದುಕನ್ನು ಸಂತೋಷದಿಂದಿರಿಸಲು ಸಾಧ್ಯವಿರುವ ಈ ಚಟುವಟಿಕೆಗಳಿಗೆ ನಿಮ್ಮೆಲ್ಲರ ಉತ್ಸಾಹದ ಭಾಗವಹಿಸುವಿಕೆ, ಪ್ರೋತ್ಸಾಹ, ಸಹಭಾಗಿತ್ವವನ್ನು ಡೀಡ್ಸ್ ಬಯಸುತ್ತದೆ.

## ಏಕರೂಪ ನಾಗರಿಕ ಸಂಹಿತೆ – ಒಳಗೂ ಹೊರಗೂ : ವಿಚಾರಣ ಸಂಕಿರಣ

ಡೀಡ್ಸ್, ಕರಾವಳಿ ಲೇಖಕಿ ವಾಚಕಿಯರ ಸಂಘ ಮತ್ತು ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ ಆಶ್ರಯದಲ್ಲಿ ಸಮಾನ ನಾಗರಿಕ ಸಂಹಿತೆ ಒಳಗೂ ಹೊರಗೂ ವಿಚಾರ ಸಂಕಿರಣವು ಅಗೋಸ್ತ್ 5, 2023ರಂದು ಮಂಗಳೂರಿನ ಸಿಒಡಿಪಿಯಲ್ಲಿ ನಡೆಯಿತು.



ಈ ವಿಚಾರ ಸಂಕಿರಣಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಅಖಿಲಾ ವಿದ್ಯಾಸಂದ್ರ, ನ್ಯಾಯವಾದಿಗಳು ಬೆಂಗಳೂರು ಮತ್ತು ಹೋರಾಟಗಾರ್ತಿ, ಏಕರೂಪ ನಾಗರಿಕ ಸಂಹಿತೆ ಮತ್ತು ವಾಸ್ತವ ಬಗ್ಗೆ ವಿಷಯ ಪ್ರಸ್ತಾಪಿಸುತ್ತಾ ಮಹಿಳೆಯರೂ, ಪುರುಷರಷ್ಟೇ ಸಮಾನರು ಎಂಬ ಮಾನಸಿಕತೆಯನ್ನು ಮೊದಲು ಹೊಂದಬೇಕು ಎಂದರು. ದಿನೇಶ್ ಹೆಗ್ಡೆ ಉಳೇಪಾಡಿ, ನ್ಯಾಯವಾದಿಗಳು ಮತ್ತು ಚಿಂತಕರು, ಮಂಗಳೂರು ಏಕರೂಪ ನಾಗರಿಕ ಸಂಹಿತೆ ಮತ್ತು ಆಡಳಿತಾತ್ಮಕ ನೆಲೆ ಬಗ್ಗೆ ತಮ್ಮ ವಿಷಯ ಮಂಡನೆ ಮಾಡಿದರು. ಯು. ಟಿ. ಫರ್ಝಾನಾ ಅಶ್ರಫ್, ಹಿರಿಯ ಪ್ರಬಂಧಕರು ಪ್ರಜಾವಾಣಿ, ಬೆಂಗಳೂರು ಏಕರೂಪ ನಾಗರಿಕ ಸಂಹಿತೆ ಮತ್ತು ಬಹುತ್ವ ಬಗ್ಗೆ ವಿಷಯ ಪ್ರಸ್ತಾವನೆ ಮಾಡಿದರು. ಕಾನೂನಿನ ಒಳಗಡೆ, ಧರ್ಮದ ಒಳಗಡೆ ಇರುವ ಲಿಂಗ ತಾರತಮ್ಯ ನಿವಾರಿಸುವುದು ಬಹುಮುಖ್ಯ ಎಂದು ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ವಹಿಸಿದ ಡೀಡ್ಸ್ ಸಂಸ್ಥೆಯ ನಿರ್ದೇಶಕರಾದ ಮರ್ಲಿನ್ ಮಾರ್ಟಿಸ್ ಹೇಳಿದರು. ಕರಾವಳಿ ಲೇಖಕಿ ವಾಚಕರ ಸಂಘದ ಅಧ್ಯಕ್ಷೆ ಜ್ಯೋತಿ ಚೇಳ್ಯಾರು ಎಲ್ಲರನ್ನೂ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆಯ ಮಂಜುಳಾ ಸುನಿಲ್ ಧನ್ಯವಾದ ಸಮರ್ಪಿಸಿದರು. ಶುಭ ಮತ್ತು ಲಗ್ಮಾ ಸಂವಿಧಾನ ಪ್ರಸ್ತಾವನೆಯನ್ನು ಹಾಡಿದರು. ಚಿತ್ರಾ ಫಾಲ್ಗುಣಿ ಕಾರ್ಯಕ್ರಮದ ನಿರ್ವಹಣೆ ಮಾಡಿದರು.

## ಕೆಟಿಸಿ ವಿದ್ಯಾರ್ಥಿಗಳಿಗೆ ಪೂರಕ ಕಾನೂನು ತರಬೇತಿ

ಅಕ್ಟೋಬರ್ 9ರಿಂದ 19ರವರೆಗೆ ಮಂಗಳೂರಿನ ಕರ್ನಾಟಕ ಥಿಯೊಲಾಜಿಕಲ್ ಕಾಲೇಜಿನ 2ನೇ ವರುಷದ ಪದವಿ ವಿದ್ಯಾರ್ಥಿಗಳು ಪ್ರಾತ್ಯಕ್ಷಿಕೆ ಅನುಭವ ಪಡೆದುಕೊಳ್ಳಲು ಡೀಡ್ಸ್‌ಗೆ ಆಗಮಿಸಿದ್ದು, ಅವರಿಗೆ ಡೀಡ್ಸ್ ಪರಿಚಯ, ಸಾಮಾಜಿಕ ಚಳವಳಿಗಳು, ಮಹಿಳಾ ಸ್ಥಿತಿಗತಿ–ಪರಿಣಾಮ, ಕಾರಣಗಳು, ಲಿಂಗತ್ವ, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ಪೋಕ್ಸೊ ಕಾಯ್ದೆ, ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆ ಕಾಯ್ದೆ, ಮಾಹಿತಿ ಹಕ್ಕು ಕಾಯ್ದೆಗೆ ಸಂಬಂದಿಸಿ ಮಾಹಿತಿ ಮತ್ತು ಪೊಲೀಸ್ ಠಾಣೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸಖಿ ಕೇಂದ್ರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ–ನ್ಯಾಯಾಲಯ ವೀಕ್ಷಣೆಗೆ ಅವಕಾಶ ನೀಡಲಾಯಿತು. ಡೀಡ್ಸ್‌ನ



ಮರ್ಲಿನ್ ಮಾರ್ಟಿಸ್, ತುಕಾರಾಮ ಎಕ್ಕಾರು, ಜೆಸಿಂತಾ ಪಿರೇರಾ, ಖುಶಿ ದೇಸಾಯಿ, ದೀಪಾ ಎಂ, ರೋಹಿಣಿ, ಕಾವ್ಯ, ಸರಿತಾ ಮಾಹಿತಿ ನೀಡಿದರು.

## ಪೂರಕ ಕಾನೂನು ಸುಗಮಕಾರಿಗೆ ಮಾಹಿತಿ ಕಾರ್ಯಕ್ರಮ

ಐದು ಜಿಲ್ಲೆಗಳಲ್ಲಿ ಸಮಿತಿಯ ಸಹಾಯದಿಂದ ಸ್ವಯಂ ಸೇವಾ ಸಂಸ್ಥೆಗಳು, ಆಶಾ ಕಾರ್ಯಕರ್ತರು, ಸ್ವಸಹಾಯ ಸಂಘಗಳ ಸದಸ್ಯರನ್ನು ಗುರುತಿಸಿ ಅವರಿಗೆ ಪೂರಕ ಕಾನೂನು ಮಾಹಿತಿ ಬಗ್ಗೆ ಕಾರ್ಯಕ್ರಮವನ್ನು ನಡೆಸಲಾಯಿತು.

**ಉತ್ತರ ಕನ್ನಡ ಜಿಲ್ಲೆಯಲ್ಲಿ** ಕಾರ್ಯಕ್ರಮವು ದಿನಾಂಕ 9–9–2023ರಂದು ಕಾರವಾರದ ಕೆಡಿಡಿಸಿ ಸಭಾಂಗಣದಲ್ಲಿ ನಡೆಯಿತು. 34 ಮಂದಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ರೇಣುಕಾ ರಾಯ್ಕರ್ ಭಾಗವಹಿಸಿ, ಪ್ರಾಧಿಕಾರದ ಸೌಲಭ್ಯಗಳ ಮಾಹಿತಿ ನೀಡಿದರು.

**ಗದಗ ಜಿಲ್ಲೆಯಲ್ಲಿ** ಕಾರ್ಯಕ್ರಮವು ದಿನಾಂಕ 13–9–2023ರಂದು ಗದಗ ಮರಾಠಾ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ನಡೆಯಿತು. ಸುಮಾರು 28 ಮಂದಿ ಭಾಗವಹಿಸಿದ್ದರು.

**ಬಳ್ಳಾರಿ ಜಿಲ್ಲೆಯಲ್ಲಿ** ಕಾರ್ಯಕ್ರಮವು ದಿನಾಂಕ 23–9–2023ರಂದು ಬಳ್ಳಾರಿಯ ಫ್ಯಾಮಿಲಿ ಪ್ಲಾನಿಂಗ್ ಅಸೋಶಿಯೇಶನ್ ಇಂಡಿಯಾ ಸಭಾಂಗಣದಲ್ಲಿ ನಡೆಯಿತು. 37 ಮಂದಿ ಭಾಗವಹಿಸಿದ್ದರು.

**ಬಾಗಲಕೋಟೆ ಜಿಲ್ಲೆಯಲ್ಲಿ** ಕಾರ್ಯಕ್ರಮವು ದಿನಾಂಕ 17–9–2023ರಂದು ಬಾಗಲಕೋಟೆಯ ಅಕ್ಷಯ ಹೊಟೇಲ್ ಸಭಾಂಗಣದಲ್ಲಿ ನಡೆಯಿತು. 29 ಮಂದಿ ಭಾಗವಹಿಸಿದ್ದರು.



**ಧಾರವಾಡ ಜಿಲ್ಲೆಯಲ್ಲಿ** ಕಾರ್ಯಕ್ರಮವು ದಿನಾಂಕ 25–9–2023ರಂದು ಧಾರವಾಡ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಭಾಂಗಣದಲ್ಲಿ ನಡೆಯಿತು. 20 ಮಂದಿ ಭಾಗವಹಿಸಿದ್ದರು.

## ಮುಖ್ಯ ತರಬೇತುದಾರರ ತರಬೇತಿ

ಯೋಜಿತ ಜಿಲ್ಲೆಗಳಲ್ಲಿ ನಡೆಯಲಿರುವ ಮೂರು ದಿನಗಳ ಮೊದಲ ಹಂತದ ಲಿಂಗತ್ವ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳನ್ನು ತಯಾರಿಸಲು ಆಯ್ದ ಸುಗಮಕಾರರಿಗೆ 2 ದಿನಗಳ ತರಬೇತಿಯನ್ನು ಸಪ್ಟೆಂಬರ್ ತಿಂಗಳ 30 ಮತ್ತು ಅಕ್ಟೋಬರ್ 1ರಂದು ಹುಬ್ಬಳ್ಳಿಯ ಜ್ಞಾನವಿಕಾಸ ತರಬೇತಿ ಕೇಂದ್ರದಲ್ಲಿ ನಡೆಸಲಾಯಿತು. ಕಾರವಾರ, ಗದಗ, ಬಾಗಲಕೋಟೆ, ಬಳ್ಳಾರಿ, ಧಾರವಾಡ ಜಿಲ್ಲೆಗಳ 23 ಮಂದಿ ಸುಗಮಕಾರರು ಭಾಗವಹಿಸಿದ್ದರು. ಸುಗಮಕಾರರು ಲಿಂಗತ್ವ ವಿಷಯಕ್ಕೆ ಸಂಬಂಧಿಸಿದ ವಿವಿಧ ವಿಷಯಗಳನ್ನು



ಚಟುವಟಿಕೆ ಆಧಾರಿತವಾಗಿ ನಿರ್ವಹಿಸಿದರು. ಮರ್ಲಿನ್ ಮಾರ್ಟಿಸ್, ತುಕಾರಾಮ ಎಕ್ಕಾರು, ಖುಶಿ ದೇಸಾಯಿ ಉಪಸ್ಥಿತರಿದ್ದರು.

## ಮಹಿಳೆಯರಿಗಿರುವ ನ್ಯಾಯ ವ್ಯವಸ್ಥೆಗಳು – ಕಾನೂನು ಸಮಾಲೋಚನಾ ಕಾರ್ಯಕ್ರಮ

**ದಕ್ಷಿಣ ಕನ್ನಡ ಜಿಲ್ಲೆ :** ದಿನಾಂಕ 12–09–2023ರಂದು ಮಂಗಳೂರಿನ



ಸಿ.ಒ.ಡಿ.ಪಿ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಯಿತು. ಈ ಸಮಾಲೋಚನಾ ಕಾರ್ಯಕ್ರಮದಲ್ಲಿ ದಕ್ಷಿಣಕನ್ನಡ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಮಾನ್ಯ ಸದಸ್ಯ ಕಾರ್ಯದರ್ಶಿಗಳಾದ ಶ್ರೀಮತಿ ಶೋಭಾ ಬಿ.ಜಿ, ಪಾಂಡೇಶ್ವರ ಮಹಿಳಾ ಪೊಲೀಸು ಠಾಣೆಯ ಸಬ್ ಇನ್ಸ್ಪೆಕ್ಟರ್ ಶ್ರೀಕಲಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹಾಗೂ ಮಹಿಳಾ ರಕ್ಷಣಾಧಿಕಾರಿಯವರಾದ ಶ್ವೇತಾ, ಸಖಿಒನ್ ಸ್ಟಾಪ್ ಸೆಂಟರ್‌ನ ಆಡಳಿತಾಧಿಕಾರಿಗಳಾದ ಪ್ರಿಯಾ, ಮಕ್ಕಳ ರಕ್ಷಣಾ ಘಟಕದಿಂದ ಕುಮಾರ್‌ರವರು ಅತಿಥಿಯಾಗಿ ಆಗಮಿಸಿದ್ದು ಆಯಾಯ ಇಲಾಖೆಗಳ ಕಾರ್ಯವೈಖರಿ ಮತ್ತು ಅಲ್ಲಿ ದೊರೆಯುವ ಸೌಲಭ್ಯಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಸುಮಾರು 29 ಮಂದಿ ಬಾಗಾರ್ಥಿಗಳು ಬಾಗವಹಿಸಿದ್ದರು.

**ಗದಗ ಜಿಲ್ಲೆ :** ದಿನಾಂಕ 13–09–2023ರಂದು ಕಾರ್ಯಕ್ರಮವನ್ನು ಗದಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಮಾನ್ಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಮಾನ್ಯ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಕೆ ಗುರುಪ್ರಸಾದ್, ಶ್ರೀ ಜಿ.ಎಸ್.ಗೌರಿ



ಪ್ಯಾನೆಲ್ ವಕೀಲರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಗದಗ. ಶ್ರೀ ಪ್ರದೀಪ್ ಬಿಸೆ, ಸಬ್ ಇನ್ಸ್ಪೆಕ್ಟರ್ ಮಹಿಳಾ ಪೋಲಿಸರು ಮಹಿಳಾ ಪೋಲಿಸ್ ಠಾಣೆ ಗದಗ, ಶ್ರೀಮತಿ ಸವಿತಾ ಹೊರ್ತಿ ಮಕ್ಕಳ ರಕ್ಷಣಾ ಘಟಕ ಗದಗ, ಮತ್ತು ಭಾಗಾರ್ಥಿಗಳಾಗಿ ಅಂಗವಿಕರ ಹಾಗೂ ಹಿರಿಯ ನಾಗರಿಕ ಇಲಾಖೆ ಗದಗ, ಸಖಿಒನ್ ಸ್ಟಾಪ್ ಸೆಂಟರ್, ಸ್ವಾಧಾರ ಕೇಂದ್ರ, ಮುಂಡರಗಿ, ರೋಣ, ಗಜೇಂದ್ರ ಗಡ, ಮತ್ತು ಶಿರಹಟ್ಟಿ ತಾಲೂಕಿನ ಸಾಂತ್ವನ ಕೇಂದ್ರದ ಸಿಬ್ಬಂದಿಗಳು, ಉಜ್ವಲ ಕೇಂದ್ರ ಗದಗ, ಗದಗ ಜಿಲ್ಲೆಯ ಸ್ಥಳಿಯ ಆಂತರಿಕ ಸಮಿತಿ ಓರ್ವ ಸದಸ್ಯರು, ಕರ್ನಾಟಕ ಮಹಿಳಾ ಸಮಾಖ್ಯ ಸಿಬ್ಬಂದಿಗಳು, ಅರೆಕಾಲಿಕ ಸ್ವಯಂಸೇವಕರು, ಹಾಗೂ ಗದಗ ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಛಯದ ಪದಾಧಿಕಾರಿಗಳು ಮತ್ತು ಸದಸ್ಯರು ಒಟ್ಟು 29 ಭಾಗಾರ್ಥಿಗಳು ಭಾಗವಹಿಸಿದ್ದರು.

**ಬಾಗಲ ಕೋಟೆ ಜಿಲ್ಲೆ :** ದಿನಾಂಕ 16–09–2023ರಂದು ಕಾರ್ಯಕ್ರಮವನ್ನು ಅಕ್ಷಯ ಇಂಟರ್ ನ್ಯಾಶನಲ್ ಹೋಟೆಲ್ ಸಭಾಂಗಣದಲ್ಲಿ ನೇರವೇರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶಂಕ್ರಮ್ಮ ಜಮ್ಮಕಟ್ಟಿ ಆಡಳಿತಾಧಿಕಾರಿ ಮತ್ತು ಎಚ್.ಜಿ, ವಿಶಾಲ ವಕೀಲರು ಸಖಿಒನ್ ಸ್ಟಾಪ್ ಸೆಂಟಬಾಗಲಕೋಟೆ ಇವರು ತಮ್ಮ ಇಲಾಖೆಯಿಂದ



ಮಹಿಳೆಯರಿಗಿರುವ 5 ಸೇವೆಗಳ ಮಾಹಿತಿ ನೀಡಿದರು. ಬಿ.ಎಮ್, ಪೀರ್ಜಾದೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮಕ್ಕಳಿಗಿರುವ ಸೌಲಬ್ಯಗಳ ಬಗ್ಗೆ ಮಾಹಿತಿಯನ್ನು ನೀಡಿದರು ಬಾಗಲಕೋಟ, ಸಾಂತ್ವನ ಕೇಂದ್ರ ಬಾಗಲಕೋಟೆ ಅರೆಕಾಲಿಕ ಸ್ವಯಂಸೇವಕರು ಮತ್ತು ಬಾಗಲಕೋಟೆ ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಛಯದ ಸುಗಮಕಾರರ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಒಟ್ಟು 17 ಭಾಗವಹಿಸಿದ್ದರು.

**ಧಾರವಾಡ ಜಿಲ್ಲೆ :** 26–09–2023 ರಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪರಶುರಾಮ ದೊಡ್ಡಮನಿ, ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶ್ರೀಮತಿ ಮಧುಮತಿ ಹುಬ್ಬಳ್ಳಿ ಮಹಿಳಾ ಸಂರಕ್ಷಣಾಧಿಕಾರಿ ಧಾರವಾಡ,



ಪ್ರಕಾಶ್ ಕೊಡ್ಲಿವಾಡ ಸಂಯೋಜಕರು ಮಕ್ಕಳ ರಕ್ಷಣಾಘಟಕ, ಸರಳ ಮಣಕವಾಡ್ ಆಡಳಿತಾಧಿಕಾರಿ ಸಖಿಒನ್ ಸ್ಟಾಪ್ ಸೆಂಟರ್ ಕಿಮ್ಸ್ ಹುಬ್ಬಳ್ಳಿ ಮತ್ತು ಡೀಡ್ಸ್ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಭಾಗಾರ್ಥಿಗಳಾಗಿ, ಸ್ವಾಧಾರ ಕೇಂದ್ರ, ಧಾರವಾಡ, ಹುಬ್ಬಳ್ಳಿ, ತಾಲೂಕಿನ ಸಾಂತ್ವನ ಕೇಂದ್ರದ ಸಿಬ್ಬಂದಿಗಳು, ಕರ್ನಾಟಕ ಮಹಿಳಾ ಸಮಾಖ್ಯ ಸಿಬ್ಬಂದಿಗಳು, ಅರೆ ಕಾಲಿಕ ಸ್ವಯಂ ಸೇವಕರು, ಹಾಗೂ ಧಾರವಾಡ ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಛಯದ ಪದಾಧಿಕಾರಿಗಳು ಮತ್ತು ಸದಸ್ಯರು ಒಟ್ಟು 28 ಜನರು ಭಾಗವಹಿಸಿದ್ದರು.

**ಬಳ್ಳಾರಿ ಜಿಲ್ಲೆ :** 22-09-2023ರಂದು ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಶನ್ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ರಾಜೇಶ್



ಹೊಸಮನಿ, ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶ್ರೀಮತಿ ವಿಜಯಲಕ್ಷ್ಮೀ ಮಕ್ಕಳ ಕಲ್ಯಾಣ ಸಮಿತಿ, ಜಲಾಲಪ್ಪ ಉಸ್ತುವಾರಿ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಳ್ಳಾರಿ ಡಿ.ಜಿ. ಮಂಜುನಾಥ ಸಂಯೋಜಕರು ಮಕ್ಕಳ ರಕ್ಷಣಾ ಘಟಕ, ಪುಷ್ಪಕೆ ಆಡಳಿತಾಧಿಕಾರಿ ಸಖಿ ಒನ್ ಸ್ಟಾಪ್ ಸೆಂಟರ್ ಬಳ್ಳಾರಿ ಮತ್ತು ಡೀಡ್ಸ್ ಸಿಬ್ಬಂದಿಗಳು ಉಪಸ್ಥಿತರಿದ್ದರು. ಭಾಗಾರ್ಥಿಗಳಾಗಿ ಜಿಲ್ಲಾಪೂರಕ ಕಾನೂನು ಸುಗಮಕಾರರ ಸಮುಚ್ಚಯ ಸಮಿತಿಯ ಪದಾಧಿಕಾರಿಗಳು ಹಾಗೂ ಸದಸ್ಯರು ಒಟ್ಟು 23 ಮಂದಿ ಭಾಗವಹಿಸಿದ್ದರು.

**ಉತ್ತರ ಕನ್ನಡ ಜಿಲ್ಲೆ :** 29-09-2023ರಂದು ಕೆ.ಡಿ.ಡಿ.ಸಿ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಶ್ರೀಮತಿ ಪದ್ಮ ತಾಂಡೇಲ್, ಪ್ಯಾನಲ್ ವಕೀಲರು, ಜಿಲ್ಲಾ



ಕಾನೂನು ಸೇವೆಗಳ ಪ್ರಾಧಿಕಾರ, ಶ್ರೀ ಅರುಣ್ ನಾಯಕ್ ಮಹಿಳಾ ಸಂರಕ್ಷಣಾಧಿಕಾರಿ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಾರವಾರ, ಮಹಿಳಾ ಪೋಲಿಸ್ ಕಾನ್ಸ್ಟೇಬಲ್ ಮಹಿಳಾ ಪೋಲಿಸ್ ಠಾಣೆ ಶ್ರೀಮತಿ ಮಂಜುಳ ಪಾಟೀಲ್ ಆಡಳಿತಾಧಿಕಾರಿ ಸಖಿ ಒನ್ ಸ್ಟಾಪ್ ಸೆಂಟರ್ ಕಾರವಾರ ಮತ್ತು ಡೀಡ್ಸ್ ಸಿಬ್ಬಂದಿಗಳು ಉಪಸ್ಥಿತರಿದ್ದರು. ಭಾಗಾರ್ಥಿಗಳಾಗಿ ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಚಯ ಸಮಿತಿಯ ಪದಾಧಿಕಾರಿಗಳು ಹಾಗೂ ಸದಸ್ಯರು, ಎನ್. ಆರ್.ಎಲ್.ಎಮ್, ಅರೆಕಾಲಿಕ ಸ್ವಯಂಸೇವಕರು, ಹೊಸ ಸುಗಮಕಾರರು ಒಟ್ಟು 28 ಮಂದಿ ಭಾಗವಹಿಸಿದ್ದರು.

## ಕರ್ನಾಟಕ ರಾಜ್ಯಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಸಭೆ



ದಿನಾಂಕ 30/09/2023 ರಂದು ಗೂಗಲ್ ಮೀಟ್ ಮೂಲಕ ಸಭೆಯನ್ನು ಆಯೋಜಿಸಲಾಗಿದ್ದು. 5 ಜಿಲ್ಲೆಯಿಂದ ಒಟ್ಟು 6 ಜನ ರಾಜ್ಯ ಸಮಿತಿಯ ಪದಾಧಿಕಾರಿಗಳು ಭಾಗವಹಿಸಿ ಜಿಲ್ಲೆಯಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ಹಂಚಿಕೆ ಮಾಡಲಾಯಿತು.

ದಿನಾಂಕ 02-10-2023ರಂದು ಕರ್ನಾಟಕ ರಾಜ್ಯ ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಸಭೆಯನ್ನು ಎಸ್.ಕೆ.ಡಿ.ಆರ್.ಡಿ.ಪಿ. ಸಭಾಂಗಣ ಧಾರವಾಡದ ರಾಯಪುರದಲ್ಲಿ ನಡೆಸಲಾಯಿತು. ಈ ಸಭೆಯಲ್ಲಿ 6 ಜಿಲ್ಲೆಗಳ ಜಿಲ್ಲಾಪೂರಕ ಕಾನೂನು ಸುಗಮಕಾರರ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು , ರಾಜ್ಯಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಒಟ್ಟು 26 ಸುಗಮಕಾರರು ಭಾಗವಹಿದ್ದರು. ಮೊದಲಿಗೆ ಜಿಲ್ಲಾವಾರು ಪ್ರತಿನಿಧಿಗಳು ಮೂರು ತಿಂಗಳಲ್ಲಿ ನಡೆಸಿದ ಸಮುಚ್ಚಯದ ಕಾರ್ಯ ಚಟುವಟಿಕೆಗಳನ್ನು ಹಂಚಿಕೆ ಮಾಡಕೊಳ್ಳಲಾಯಿತು. ಮುಂದೆ ನಡೆಯಲಿರುವ ಪೂರಕ ಕಾನೂನು ಸುಗಮಕಾರರ ತರಬೇತಿಯ ಜವಾಬ್ದಾರಿಗಳನ್ನು ಹಂತಹಂತವಾಗಿ ನಿರ್ವಹಿಸಲು ನಿರ್ಧರಿಸಲಾಯಿತು. ಜಿಲ್ಲೆಗಳಲ್ಲಿ ವಿವಿಧ ಇಲಾಖೆಗಳೊಂದಿಗೆ ವಕಾಲತ್ತು ಮಾಡಿರುವುದರ ಚರ್ಚೆ ಮತ್ತು ಮುಂದಿನ ಹಂತದ ಅನುಸರಣೆ ಅವುಗಳನ್ನು ಕಾರ್ಯಗತಗೊಳಿಸಲು ತಿಳಿಸಲಾಯಿತು. ಡೀಡ್ಸ್ ಸಂಸ್ಥೆಯಿಂದ ಮರ್ಲಿನ್ ಮಾರ್ಟಿಸ್, ತುಕಾರಾಮ, ಋಷಿ ದೇಸಾಯಿ, ರೋಹಿಣಿ ಗೊರುಲ್ ಸಭೆಯಲ್ಲಿ ಉಪಸ್ಥಿತರಿದ್ದರು.

ಮುದ್ರಣ : ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A news letter by DEEDS, Mangalore

ವಿಳಾಸ : **ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್)**
ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. - 575 002. ದೂರವಾಣಿ : 0824-2217022, 4281037
E-mail : deeds82@rediffmail.com Website : www.deedsmangaluru.in